

‘ವ್ಹಾವ್! What a surprise! ನಿನ್ನನ್ನು ಇಲ್ಲಿ ಭೇಟಿಯಾಗುತ್ತೀನಿ ಅಂತ ನಾನು ನಿರೀಕ್ಷಿಸಿರಲಿಲ್ಲ’ ಮೂರ್ತಿ ಹೇಳಿದನು. ‘ಕೆಲವು ಸರ್‌ಪ್ರೈಸ್‌ಗಳು ಅಹಿತಕರವಾಗಿರುತ್ತವೆ, This meeting is unusual, almost like a bad déjàvu' ರೋಹಿಣಿ ವ್ಯಂಗ್ಯದಿಂದ ಉತ್ತರಿಸಿದಳು. ಆತ ಉತ್ತರಿಸಲಿಲ್ಲ. ಕೆಲವೊಮ್ಮೆ ಸಂಬಂಧಗಳಲ್ಲಿ silent mode ಅಗತ್ಯವೆಂದು ಆತ ಯೋಚಿಸುತ್ತಿದ್ದ. ಅಷ್ಟರಲ್ಲಿ ರೂಬಿ ಮತ್ತು ವರುಣ್ ಬಂದರು. ‘ಹಾಯ್ ಅಮ್ಮಾ... ಹಾಯ್ ಅಪ್ಪಾ!’ ರೂಬಿಯ ಧ್ವನಿ ಕೇಳಿ ರೋಹಿಣಿಗೆ ಅರ್ಥವಾಯಿತು– ಇದೇ ಸರ್‌ಪ್ರೈಸ್! ತಾಯಿ-ತಂದೆಯನ್ನು ಒಟ್ಟಿಗೆ ತರುವ ಮಗಳ ಯೋಜನೆಯೇ ಇದು?

ಮೂರ್ತಿ ಒಬ್ಬ ಚಿತ್ರಕಲಾವಿದ. ರೂಬಿಕ್ಸ್ ಕ್ಯೂಬ್ ಜೋಡಿ ಆಡುವ ಹವ್ಯಾಸ ಇಟ್ಟುಕೊಂಡಿದ್ದ. ರೂಬಿಕ್ಸ್ ಕ್ಯೂಬ್ ಅನ್ನು ಕೈಯಲ್ಲಿ ಹಿಡಿದು ತಿರುಗಿಸುತ್ತಲೇ ಇರುತ್ತಾನೆ. ಬಣ್ಣಗಳ ಬ್ಲಾಕ್‌ನ ಯಾವ ಮುಖವೂ ಸರಿಯಾಗಿ ಹೊಂದುವುದಿಲ್ಲ. ಪ್ರತೀ ಬಾರಿ ಅವನು ಕ್ಯೂಬ್ ತಿರುಗಿಸಿದಾಗ, ಒಂದು ಬಣ್ಣ ಬದಲಾಗುತ್ತದೆ. ನೆನಪಿನಿಂದ ಮರೆವಿಗೆ. ಒಂದೆಡೆ ಇಟ್ಟ ವಸ್ತುಗಳನ್ನು ಮರೆಯುವುದು ಅವನ ಮತ್ತೊಂದು ಚಾಳಿ. ಅದಕ್ಕಾಗಿ ಗ್ಯಾಜೆಟ್ ಮೊರೆ ಹೋಗುತ್ತಾನೆ. ‘ಅಲೆಕ್ಸಾ, where’s my Rubik’s Cube?’ ಎಂದು ಅವನು ಕೇಳುತ್ತಾನೆ. ಯಂತ್ರದ ಧ್ವನಿ ಬರುತ್ತದೆ: I can’t see that from here. ‘ಅಪ್ಪಾ, ನೀನಿಲ್ಲಿ ಬಂದಿರುವುದು ರೂಬಿಕ್ಸ್‌ಕ್ಯೂಬ್ ಆಡಲು ಅಲ್ಲ; ನಮ್ಮೊಂದಿಗೆ ಸಂತೋಷವಾಗಿ ಕಾಲ ಕಳೆಯಲು’ ಮಗಳ ಆರೋಪವನ್ನು ಗಂಭೀರವಾಗಿ ಪರಿಗಣಿಸಿ ರೂಬಿಕ್ಸ್ ಕ್ಯೂಬ್ ಅನ್ನು ತನ್ನ ಕೋಟಿನ ಜೇಬಿಗೆ ಇಳಿಬಿಟ್ಟು, ಮಗಳ ಕಡೆ ಮುಖ ಮಾಡಿ ಹುಸಿನಕ್ಕು ಕೇಳಿದ. ‘ಹೇಳಿ ಯುವರಾಣಿ?’ ರೂಬಿ ಅಪ್ಪ-ಅಮ್ಮನ ಕಣ್ಣಲ್ಲಿ ಕಣ್ಣಿಟ್ಟು ಹೇಳಿದಳು. ‘I’m pregnant...’ ಮಗಳ ಮಾತು ಅಪ್ಪ- ಅಮ್ಮನಿಗೆ ಸಂಭ್ರಮ ತರುವುದಾಗಿತ್ತು. ಅಳಿಯ ವರುಣ್ ಮತ್ತು ಮಗಳು ರೂಬಿಗೆ ಶುಭ ಹಾರೈಸಿದರು.

ಅರ್ಧ ದಿನದ ನಂತರ ಅಮ್ಮನೊಂದಿಗೆ ರೆಸಾರ್ಟ್ ಹುಲ್ಲುಗಾವಲಿನಲ್ಲಿ ಹೆಜ್ಜೆ ಹಾಕುತ್ತಾ ರೂಬಿ ಹೇಳಿದಳು. ‘Amma, I’ve decided to end it’ ರೂಬಿ ತಾಯಿಯ ಭುಜಕ್ಕೊರಗಿ ಬಿಕ್ಕಳಿಸಿದಳು. ‘Things aren’t going well between Varun and me. Our marriage is at stake’. ಮಗಳ